ಇದೆ ಅಷ್ಟೇ ಕಳಕಳಿಯಿಂದ ಈ ಸರ್ಕಾರ 125 ರೂಪಾಯಿ ಏನಿದೆ ಅದನ್ನು ಮಾಡುವುದಕ್ಕೆ ನಾವು ಏನು ಟ್ರೈ ಮಾಡಿದ್ದೇವೆ ಅದು ಆಗದೇ ಇದ್ದರೆ 89 ರೂಪಾಯಿಯನ್ನು ಈ ವರ್ಷ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ.

ಸಣ್ಣ ಕೈಗಾರಿಕೆಗಳಿಗೆ ಕೊಡಬೇಕಾಗಿರುವ ಸಹಾಯಧನ

75 (802) : ಶ್ರೀ ಪಾಟೀಲ್ ಡಿ.ಆರ್. (ಗದಗ್) – ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಣ್ಣ ಕೈಗಾರಿಕೆಗಳಿಗೆ ಸರ್ಕಾರ ಕೊಡಬೇಕಾಗಿರುವ ಸಹಾಯ ಧನದ ಬಾಕಿ ಎಷ್ಟು;

ಆ) ಈ ಸಹಾಯಧನ ಎಷ್ಟು ವರ್ಷಗಳಿಂದ ಬಾಕಿ ಇದೆ;

ಇ) ಇದನ್ನು ಪೂರ್ತಿಯಾಗಿ ಬಿಡುಗಡೆ ಮಾಡಲು ಸರ್ಕಾರಕ್ಕೆ ಇರುವ ತೊಂದರೆಗಳೇನು;

ಈ) ಸಹಾಯಧನವನ್ನು ಪೂರ್ತಿ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಶಿವಾನಂದ ಎನ್ ನಾಯಕ್ (ಸಣ್ಣ ಕೈಗಾರಿಕಾ ಸಚಿವರು)–

ಅ) ರೂ.202.50 ಕೋಟಿ ಸಹಾಯಧನ ಬಿಡುಗಡೆ ಮಾಡಲು ಬಾಕಿ ಇರುತ್ತದೆ.

ಆ) ವಿವಿಧ ವರ್ಗಗಳಲ್ಲಿ ವಿವಿಧ ಅವಧಿಗಳಿಗೆ ಬಾಕಿ ಇರುವ ಸಹಾಯಧನ ವಿವರಗಳು ಕೆಳಕಂಡಂತಿವೆ.

ಸ್ವಂತ ಬಂಡವಾಳ ಹೂಡಿದ ಘಟಕಗಳು:

1.1.99 – 31.03.2006 ರೂ.65.49 ಕೋಟಿ

ಸ್ವಂತ ಬಂಡವಾಳ ಹೂಡಿದ ರೇಷ್ಮೆ ಮತ್ತು ಜವಳಿ ಘಟಕಗಳು:

1.4.2003 – 31.03.2006 ರೂ.7.17 ಕೋಟಿ

ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದ ಘಟಕಗಳು

1.4.2000 – 31.03.2004

1.4.2004 – 31.03.2005 ರೂ.63.83 ಕೋಟಿ

1.4.2005 – 31.03.2006

ಕೋಳಿ ಸಾಕಾಣಿಕೆ (ಬ್ರಾಯ್ಲರ್)

1.1.99 – 31.03.2004 ರೂ.34.33 ಕೋಟಿ

ಇಟ್ಟಿಗೆ :

1.1.99 – 31.03.2006 ರೂ.31.67 ಕೋಟಿ

ಇ) ಪೂರ್ತಿ ಸಹಾಯಧನವನ್ನು ಬಿಡುಗಡೆ ಮಾಡಲು ಆಯವ್ಯಯದಲ್ಲಿ ಅನುದಾನದ ಕೊರತೆಯಿಂದ ಸಾಧ್ಯವಾಗಿರುವುದಿಲ್ಲ.

ಈ) ಸರ್ಕಾರವು ಬಾಕಿ ಇರುವ ಸಹಾಯಧನವನ್ನು ಬಿಡುಗಡೆ ಮಾಡಲು ಈಗಾಗಲೇ ಕ್ರಮಕೈಗೊಂಡಿದ್ದು, 2004–05ನೇ ಸಾಲಿನಲ್ಲಿ ಕೆ.ಎಸ್.ಎಫ್.ಸಿ. ಬಾಂಡ್ ಮುಖಾಂತರ ಹಾಗೂ ಆಯವ್ಯಯದ ಪೂರಕ ಅಂದಾಜಿನಲ್ಲಿ ಒಟ್ಟು ರೂ.146.00 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. 2005–06ನೇ ಸಾಲಿನಲ್ಲಿ ಆಯವ್ಯಯದಲ್ಲಿ ಒದಗಿಸಿದ್ದ ರೂ.15.00 ಕೋಟಿಗಳ ಜೊತೆಗೆ ಪೂರಕ ಅಂದಾಜಿನಲ್ಲಿ ರೂ.69.10 ಕೋಟಿ ಅಳವಡಿಸಿ ಒಟ್ಟು 84.10 ಕೋಟಿ ಬಿಡುಗಡೆ ಮಾಡಲಾಗಿದೆ. ಹಾಗೂ ಪ್ರಸಕ್ತ ಸಾಲಿನಲ್ಲಿ ಆಯವ್ಯಯದಲ್ಲಿ ರೂ.10.00 ಕೋಟಿ ಅಳವಡಿಸಿದ್ದು ಇದರ ಜೊತೆಗೆ ಪೂರಕ ಅಂದಾಜಿನಲ್ಲಿ ರೂ.20.00 ಕೋಟಿ ಒದಗಿಸಿ ಒಟ್ಟು ರೂ.30.00 ಕೋಟಿ ಈಗಾಗಲೇ ಸರ್ಕಾರದಿಂದ ಬಿಡುಗಡೆ ಮಾಡಲಾಗಿದೆ.

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಉತ್ತರವನ್ನು ಒದಗಿಸಿದ್ದಾರೆ. ಸಣ್ಣ ಕೈಗಾರಿಕೆಗಳಿಗೆ ಬಿಡುಗಡೆ ಮಾಡಬೇಕಿರುವ ಬಾಕಿ 202.50 ಕೋಟಿ ಸಹಾಯಧನವನ್ನು ಬಿಡುಗಡೆ ಮಾಡಲು ಏನು ಕ್ರಮ ಕೈಗೊಳ್ಳುತ್ತೀರಿ ಎಂದು ಕೇಳಿರುವುದಕ್ಕೆ ಈಗ ನಾವು 30 ಕೋಟಿ ಬಿಡುಗಡೆ ಮಾಡಿದ್ದೇವೆ ಎಂದು ಮಾತ್ರ ಉತ್ತರ ಕೊಟ್ಟಿದ್ದಾರೆ. ಹಿಂದೆ ಇದ್ದಂಥ ಧರ್ಮಸಿಂಗ್ ಸರ್ಕಾರದಲ್ಲಿ 20 ತಿಂಗಳೊಳಗೆ 230 ಕೋಟಿ ಸಬ್ಸಿಡಿ ರಿಲೀಸ್ ಮಾಡಿದ್ದಾರೆ. ನೀವು ಈಗ ಅಧಿಕಾರಕ್ಕೆ ಬಂದು ಈಗಾಗಲೇ ಒಂದು ವರ್ಷ ಕಳೆಯಿತು, ಒಂದು ವರ್ಷದಲ್ಲಿ ನೀವು 30 ಕೋಟಿ ಮಾತ್ರ ರಿಲೀಸ್ ಮಾಡಿದ್ದೀರಿ. ನೀವೂ ಕೂಡ 20 ತಿಂಗಳೊಳಗೆ ಬಾಕಿ ಇರುವ 202.50 ಕೋಟಿ ರೂಪಾಯಿಗಳ ಸಬ್ಸಿಡಿಯನ್ನು ರಿಲೀಸ್ ಮಾಡುತ್ತೇವೆ ಎನ್ನತಕ್ಕಂಥ ಭರವಸೆಯನ್ನು ನೀವು ಈ ಸದನಕ್ಕೆ ದಯವಿಟ್ಟು ಕೊಡಬೇಕು ಮತ್ತು ಆ ಪ್ರಕಾರ ಕ್ರಮ ಕೈಗೊಳ್ಳಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯನಾಯ್ಡು(ಭಾರೀ ಕೈಗಾರಿಕಾ ಸಚಿವರು) (ಸಣ್ಣ ಕೈಗಾರಿಕಾ ಸಚಿವರ ಪರವಾಗಿ): ಮಾನ್ಯ ಉಪಾಧ್ಯಕ್ಷರೆ, ಸಬ್ಸಿಡಿ ಬಾಕಿ 202.50

ಕೋಟಿ ಏನಿದೆ ಇದರಲ್ಲಿ ಹಿಂದೆ 2004 ರಲ್ಲಿ ಇಟ್ಟಿಗೆ ಮತ್ತು ಕೋಳಿ ಸಾಕಾಣಿಕೆ, ಇವೆರಡಕ್ಕೂ ಸೇರಿ 66 ಕೋಟಿ ರೂಪಾಯಿಗಳನ್ನು ಡೆಫರ್ ಮಾಡಿ, ಕೊಡಬಾರದು ಎಂದು ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಇನ್ನುಳಿದ 134.50 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ನಮ್ಮಲ್ಲಿ ಈಗಾಗಲೇ 10 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದಾರೆ. ಉಳಿಕೆ ಇನ್ನೂ 124.50 ಕೋಟಿ ರೂಪಾಯಿಗಳು ಬೇಕಾಗಿದೆ. ಇಂದು ಬೆಳಿಗ್ಗೆ ಮಾನ್ಯ ಆರ್ಥಿಕ ಸಚಿವರಲ್ಲಿ ಈ ಬಗ್ಗೆ ಕೇಳಿದ್ದೇನೆ. ಅವರು ಪರಿಶೀಲನೆ ಮಾಡುತ್ತೇನೆ ಮತ್ತು ನಾಳೆ ನಾಡಿದ್ದರಲ್ಲಿ ಈ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ. ಇದಲ್ಲದೇ ಇಷ್ಟು ಹಣ ತುರ್ತಾಗಿ ಬೇಕಾಗಿದೆ ಎಂದು ಈಗಾಗಲೇ ಒಂದು ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ. ಸಧ್ಯದಲ್ಲಿಯೇ ಒಂದು ತೀರ್ಮಾನವನ್ನು ತೆಗೆದುಕೊಂಡು ಹಂತ ಹಂತವಾಗಿ ಬಿಡುಗಡೆ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ.

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಸಚಿವರು ಈ ಕಡೆ ಕುಳಿತಿದ್ದಾಗ ಸಣ್ಣ ಕೈಗಾರಿಕೆಗಳಿಗೆ ಬಿಡುಗಡೆ ಮಾಡಬೇಕಾದ ಸಬ್ಸಿಡಿ ಬಗ್ಗೆ ಎಷ್ಟು ಕಾಳಜಿಯನ್ನು ತೋರಿಸಿ ನೀವೂ ಮತ್ತು ಜಗದೀಶ್ ಶೆಟ್ಟರ್ ಮತ್ತು ಯಡಿಯೂರಪ್ಪನವರು ಕೆಲಸವನ್ನು ಮಾಡುತ್ತಿದ್ದಿರಿ ಈಗ ಆ ಕಡೆಗೆ ಬಂದ ಮೇಲೂ ಕೂಡ ಅದೇ ಕಾಳಜಿಯನ್ನು ನೀವು ತೋರಿಸಬೇಕಲ್ಲವೇ. ವಿರೋಧ ಪಕ್ಷದಲ್ಲಿದ್ದಾಗ ಇದ್ದಂಥ ಕಾಳಜಿಯನ್ನೇ ಅಧಿಕಾರದಲ್ಲಿದ್ದಾಗಲೂ ಕೂಡ ತೋರಿಸಬೇಕು. ದಯವಿಟ್ಟು ಜಗದೀಶ್ ಶಟ್ಟರ್‌ರವರು ಅಂಥ ಭರವಸೆಯನ್ನು ಈ ಸದನಕ್ಕೆ ಈಗ ಕೊಡಬೇಕು. 66 ಕೋಟಿ ಕೊಡಬಾರದೆಂದು ನೀವು ನಿರ್ಣಯ ಮಾಡಿದ್ದೀರಿ, ನಿಮ್ಮ ಪಾಲಿಸಿ ನಿರ್ಣಯ ಆ ರೀತಿ ಇದೆ, ಅದರ ಬಗ್ಗೆ ಮುಂದೆ ವಿಚಾರ ಮಾಡೋಣ. ಆದರೆ ಉಳಿದ 134.50 ಕೋಟಿ ಸಬ್ಸಿಡಿ ಬಾಕಿ ಸಣ್ಣ ಕೈಗಾರಿಕೆಗಳಿಗೆ ಏನು ಕೊಡಬೇಕಾಗಿದೆ ಅದು ಕಮಿಟೆಡ್ ಆಗಿರುವಂಥದ್ದು. ನೀವು ಆ ಹಣವನ್ನು ರಿಲೀಸ್ ಮಾಡುತ್ತೇವೆ ಎನ್ನುವಂಥ ಭರವಸೆಯನ್ನು ಕೊಡಲಿಲ್ಲವೆಂದರೆ ಹೇಗೆ ಹೇಳಿ. ಅದರಲ್ಲೂ ಇದು ಸಣ್ಣ ಕೈಗಾರಿಕೆಗಳಿಗೆ ಸಂಬಂಧಪಟ್ಟದ್ದು. ದಯವಿಟ್ಟು ಜಗದೀಶ್ ಶೆಟ್ಟರ್‌ರವರು ಮತ್ತು ಕಟ್ಟಾ ಸುಬ್ರಹ್ಮಣ್ಯ ನಾಯ್ಡುರವರಿಬ್ಬರೂ ಈ ಬಗ್ಗೆ ಹೇಳಬೇಕು. ಮಾನ್ಯ ಅಶೋಕ್‌ರವರು ಇಲ್ಲಿಯೇ ಇದ್ದಾರೆ. ನೀವು ಹೇಳಿ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಮಾನ್ಯ ಡಿ.ಆರ್. ಪಾಟೀಲ್‌ರವರು ಬಹಳ ಹಿರಿಯರಿದ್ದಾರೆ. ಅವರು ಹೇಳಿದ ವಿಚಾರ ಬಹುಶಃ ಸತ್ಯವಾಗಿರುವಂಥದ್ದು. ಸಣ್ಣ ಕೈಗಾರಿಕೆಗಳಿಗೆ ಹಣ ಬಿಡುಗಡೆ ಮಾಡುವುದರಲ್ಲಿ ಸರ್ಕಾರ ವಿಳಂಬ ಮಾಡುವುದಿಲ್ಲ. ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ 124.10 ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಹಾಗೆಂದು ಹೇಳಿ ನಾವೇನೂ ನಿರ್ಲಕ್ಷ್ಯ ಮಾಡಿಲ್ಲ. ಸರ್ಕಾರ ಅಸ್ತಿತ್ವಕ್ಕೆ ಬಂದ 15 ದಿವಸಗಳಲ್ಲಿಯೇ ನಾವು 50 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅದು ಆದ ಮೇಲೆ ಎರಡು ಕಂತಿನಲ್ಲಿ ಒಟ್ಟಾರೆ 124.50 ಕೋಟಿ ರೂಪಾಯಿಗಳಷ್ಟು ಹಣವನ್ನು ನಾವು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಉಳಿದ ಹಣವನ್ನು ಮಾನ್ಯ ಆರ್ಥಿಕ ಸಚಿವರಲ್ಲಿ ನಾಳೆ ನಾಡಿದ್ದು ಕೇಳಿ ಅದರ ಬಗ್ಗೆ ತೀರ್ಮಾನವನ್ನು ತೆಗೆದುಕೊಂಡು ತಮಗೆ ತಿಳಿಸುತ್ತೇವೆ.

ಶ್ರೀ ಎಸ್.ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ದಯವಿಟ್ಟು ತಮ್ಮಲ್ಲಿ ಒಂದು ವಿನಂತಿ. ಇದಕ್ಕೆ ಸಂಬಂಧವಿಲ್ಲದಿದ್ದರೂ ಕೂಡ ಮಾನ್ಯ ಸಚಿವರಲ್ಲಿ ಕೇಳಬಯಸುವುದೇನೆಂದರೆ, ಮುಂಡರಗಿ ಕೆ.ಐ.ಎ.ಡಿ.ಬಿ.ಯೊಳಗೆ ಜಾಗ ಖರೀದಿ ಮಾಡಿದ್ದಾರೆ. ಅಲ್ಲಿ ಜಾಲಿ ಬೆಳೆಯುತ್ತಿದೆ. ಆ ನಂತರ ಆ ಜಾಗದಲ್ಲಿ 4 ಎಕರೆಯನ್ನು ಐ.ಟಿ.ಐ.ಗೆ ಕೊಡಿಸಿದಿರಿ. ಐ.ಟಿ.ಐ.ನವರು ಬಂದು ತಮಗೆ ರೊಕ್ಕವನ್ನೂ ಕೂಡ ತುಂಬಿದ್ದಾರೆ, ಅದೇ ಡಿಪಾರ್ಟ್‌ಮೆಂಟ್‌ನವರು. ಬಡ್ಡಿ ಕೊಟ್ಟಿಲ್ಲವೆಂದು ಹೇಳಿ ಅದನ್ನು ಬಿಟ್ಟುಕೊಡುತ್ತಿಲ್ಲ. ಇದರಿಂದಾಗಿ ಅಲ್ಲಿ ಬಿಲ್ಡಿಂಗ್ ಆಗುತ್ತಿಲ್ಲ. ಆದುದರಿಂದ ದಯವಿಟ್ಟು ಬಡ್ಡಿ ಬಿಡಬೇಕೆಂದೂ ಕೂಡ ನಿಮ್ಮ ರೂಲ್ಸ್‌ನಲ್ಲಿ ಇದೆ, ಹೇಳಿದ್ದಾರೆ. ಆದುದರಿಂದ ದಯವಿಟ್ಟು ಅದನ್ನು ಬಿಡುವುದಕ್ಕೆ ಆದೇಶ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು: ಇನ್ನು ಮೂರ್ನಾಲ್ಕು ದಿವಸಗಳಲ್ಲಿ ಸಂಬಂಧ ಪಟ್ಟ ಅಧಿಕಾರಿಗಳನ್ನು ಕರೆದು ತೀರ್ಮಾನವನ್ನು ತೆಗೆದುಕೊಂಡು ತಮಗೆ ತಿಳಿಸುತ್ತೇನೆ.

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ಉತ್ತರಿಸುವುದು

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ದಿನಾಂಕ 05.02.2007 ರಂದು 5 ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 123 ಪ್ರಶ್ನೆಗಳ ಪೈಕಿ 92 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.